ಕಥಾಲೋಕ


# ಪಂಚತಂತ್ರ ಕಥೆ

## ಸಹಸ್ರಬುದ್ಧಿ, ಶತಬುದ್ಧಿ, ಏಕಬುದ್ಧಿಯರ ಕಥೆ

ಒಂದು ಜಲಾಶಯದಲ್ಲಿ ಸಹಸ್ರಬುದ್ಧಿ ಮತ್ತು ಶತಬುದ್ಧಿ ಎಂಬ ಎರಡು ಮೀನುಗಳು ವಾಸಿಸುತ್ತಿದ್ದವು. ಅಲ್ಲಿ ಏಕಬುದ್ಧಿ ಎನ್ನುವ ಕಪ್ಪೆ ಕೂಡ ವಾಸಿಸುತ್ತಿತ್ತು. ಇವು ಮೂವರೂ ಬಹಳ ಸ್ನೇಹದಿಂದ ಸಂತೋಷವಾಗಿ ಜೀವಿಸಿದ್ದವು. ಪರಸ್ಪರ ಒಳ್ಳೆಯ ಮಾತುಗಳನ್ನು ಆಡಿಕೊಂಡು, ಸರಸವಾಗಿ ಕಾಲ ಕಳೆಯುತ್ತಿದ್ದವು.

ಒಂದು ದಿನ ಹೀಗೆಯೇ ಮಾತನಾಡಿಕೊಂಡಿರುವಾಗ ಸೂರ್ಯ ಮುಳುಗಿದ, ಕತ್ತಲಾಯಿತು. ದಡದ ಮೇಲೆ ಮೀನುಗಾರರು "ನಾಳೆ ಬಂದು ಬಲೆ ಹಾಕೋಣ" ಎಂದು ಮಾತನಾಡಿಕೊಳ್ಳುವುದು ಕೇಳಿಸಿತು. ಆಗ ಅಲ್ಲಿದ್ದ ಮೀನುಗಳಿಗೆಲ್ಲ ಗಾಬರಿಯಾಯಿತು. ಕಪ್ಪೆ ಹೇಳಿತು: "ಶತಬುದ್ಧಿ, ಕೇಳಿಸಿಕೊಂಡೆಯಾ? ಇವತ್ತು ರಾತ್ರಿಯೆ ನಾವು ಇಲ್ಲಿಂದ ಪಲಾಯನ ಮಾಡುವುದು ಒಳ್ಳೆಯದಲ್ಲವೆ?" ಅದಕ್ಕೆ ಸಹಸ್ರಬುದ್ಧಿ ಒಪ್ಪಲಿಲ್ಲ. "ನಾಳೆ ಅವರು ಬರುತ್ತಾರೆ ಎಂದು ಏನು ಖಾತರಿ? ಬಂದರೂ ನಿನ್ನ ರಕ್ಷಣೆ ನನ್ನ ಮೇಲೆ ಬಿಡು. ನನಗೆ ಪ್ರಪಂಚದ ಅರಿವು ಚೆನ್ನಾಗಿದೆ" ಎಂದಿತು. ಆಗ ಶತಬುದ್ಧಿ "ಹೌದು, ಹೌದು, ನಿನಗೆ ಸಹಸ್ರಬುದ್ಧಿ ಎಂಬ ಹೆಸರು ಸರಿಯಾಗಿ ಒಪ್ಪುತ್ತದೆ. ಯಾರದೋ ಮಾತು ಕೇಳಿ ವಂಶ ಪರಂಪರಾಗತವಾದ ಈ ಜಲಾಶಯವನ್ನು ಬಿಟ್ಟುಹೋಗುವುದೇ? ಇಲ್ಲಿಂದ ನಾವು ಯಾರೂ ಕದಲಕೂಡದು. ನನ್ನ ಬುದ್ಧಿಬಲದಿಂದ ನಿನ್ನನ್ನು ರಕ್ಷಿಸುತ್ತೇನೆ" ಎಂದು ಹೇಳಿತು. ಅದಕ್ಕೆ ಕಪ್ಪೆ "ನನ್ನ ಅಭಿಪ್ರಾಯ ಬೇರೆ. ನಾನು ಈಗಲೇ ಬೇರೆ ಕಡೆ ಹೋಗುತ್ತೇನೆ" ಎಂದು ತನ್ನ ಹೆಂಡತಿಯೊಡನೆ ಬೇರೆ ಜಲಾಶಯಕ್ಕೆ ಹೊರಟುಬಿಟ್ಟಿತು.

ಬೆಳಗ್ಗೆ ಮೀನುಗಾರರು ಬಲೆಬೀಸಿ ಮೀನು ಹಿಡಿದರು. ಮೀನುಗಳನ್ನು ಹೊತ್ತುಕೊಂಡು, ಮನೆಗೆ ಹೊರಟರು. ಶತಬುದ್ಧಿಯನ್ನು ಒಬ್ಬನು ತಲೆಯ ಮೇಲೆ ಹೊತ್ತಿದ್ದನು. ಸಹಸ್ರಬುದ್ಧಿಯನ್ನು ಇನ್ನೊಬ್ಬ ಹೆಗಲಿಗೆ ನೇತುಹಾಕಿಕೊಂಡಿದ್ದನು.



ಅಲ್ಲೇ ಪಕ್ಕದ ಜಲಾಶಯದಲ್ಲಿದ್ದ ಕಪ್ಪೆ ತನ್ನ ಹೆಂಡತಿಗೆ ಹೇಳಿತು: "ಅದೋ ನೋಡು, ಸಹಸ್ರಬುದ್ಧಿ, ಶತಬುದ್ಧಿಯರ ಗತಿ. ಇಬ್ಬರೂ ಬಲೆಗೆ ಬಿದ್ದರು. ಏಕಬುದ್ಧಿಯವರಾದ ನಾವು ಮಾತ್ರ ನೀರಿನಲ್ಲಿ ನಲಿಯುತ್ತಿದ್ದೇವೆ."

ಅದಕ್ಕೇ ಹೇಳುವುದು, 'ವರಂ ಬುದ್ಧಿಃ ನ ಸಾ ವಿದ್ಯಾ' – **ಹೆಚ್ಚಿನ ಬುದ್ಧಿ ಇದ್ದ ಮಾತ್ರಕ್ಕೆ ಅದನ್ನೇ ವಿದ್ಯೆ ಎಂದು ಪರಿಗಣಿಸಬಾರದು. ಬುದ್ಧಿಯನ್ನು ಉಪಯೋಗಿಸಿಕೊಂಡು ಜೀವನಕೌಶಲವನ್ನು ಬೆಳೆಸಿಕೊಳ್ಳಬೇಕು. ಇಲ್ಲದಿದ್ದರೆ ಬರಿ ಬದನೆಕಾಯಿ ಪಂಡಿತನಂತೆ ಇರಬೇಕಾಗುತ್ತದೆ.**

## ಸಂಸ್ಕೃತಿ ಪರಿಚಯ

### ಉಪನಿಷತ್ತುಗಳು

ಉಪನಿಷತ್ತುಗಳು ಸಾಧಾರಣವಾಗಿ ವೇದಗಳ ಅಂತ್ಯಭಾಗದಲ್ಲಿ ಬರುತ್ತವೆ. ವೈದಿಕ ವಿಚಾರಧಾರೆ ಇಲ್ಲಿ ತನ್ನ ಅತ್ಯುನ್ನತ ಮಟ್ಟವನ್ನು ಮುಟ್ಟಿದೆ. ಆದ್ದರಿಂದ ಉಪನಿಷತ್ತುಗಳನ್ನು **ವೇದಾಂತ** ಎಂದು ಕರೆಯುತ್ತಾರೆ. ಅನೇಕ ಉಪನಿಷತ್ತುಗಳು ಇವೆ. ಅವುಗಳಲ್ಲಿ ಹತ್ತು ಮುಖ್ಯವಾದುವು. ಅವೆಂದರೆ, **ಈಶ, ಕೇನ, ಕಠ, ಮುಂಡಕ, ಮಾಂಡೂಕ್ಯ, ಪ್ರಶ್ನ, ಐತರೇಯ, ತೈತ್ತಿರೀಯ, ಛಾಂದೋಗ್ಯ ಮತ್ತು ಬೃಹದಾರಣ್ಯಕ.** ಉಪನಿಷತ್ತುಗಳ ವಿದ್ಯೆಯ ವಿಷಯದಲ್ಲಿ ನಿಷ್ಠೆಯಿಂದ ನಡೆದುಕೊಳ್ಳಬೇಕು; ಅದನ್ನು ಚೆನ್ನಾಗಿ ಪರಿಶೀಲಿಸಬೇಕು. ಆಗ ನಮ್ಮ ಸಂಸಾರದುಃಖಕ್ಕೆ ಕಾರಣವಾದ ಅವಿದ್ಯೆಯನ್ನು (ತಪ್ಪು ತಿಳಿವಳಿಕೆ) ಈ ವಿದ್ಯೆ ನಾಶಪಡಿಸುತ್ತದೆ. ಅದಲ್ಲದೆ, ಈ ವಿದ್ಯೆಗೆ ಶರಣಾದ ಸಾಧಕರನ್ನು ಪರಬ್ರಹ್ಮದೆಡೆಗೆ ನಡೆಸುತ್ತದೆ. ಈ ಕಾರಣಗಳಿಂದ ಬ್ರಹ್ಮವಿದ್ಯೆಗೆ **ಉಪನಿಷತ್** ಎಂಬ ಅರ್ಥ ಬಂದಿದೆ ಎಂದು ಶ್ರೀಶಂಕರಾಚಾರ್ಯರು ಹೇಳುತ್ತಾರೆ. ಇದೇ ಉಪನಿಷತ್ತುಗಳ ಉದ್ದೇಶ. ವೇದಗಳಲ್ಲಿ ಹುದುಗಿರುವ ಜ್ಞಾನದ ಸಾರವೇ ಉಪನಿಷತ್ತುಗಳು. ವೈವಿಧ್ಯದ ನಡುವೆ ಇರುವ ಏಕತೆಯನ್ನು ಅವು ಪ್ರತಿಪಾದಿಸುತ್ತವೆ; ವಿಶ್ವದ ಮೂಲಸತ್ಯವಾದ ಪರಬ್ರಹ್ಮದ ಅರಿವನ್ನು ಮಾಡಿಕೊಡುತ್ತವೆ. ವೇದದ ಸಂಹಿತೆಗಳಲ್ಲಿನ ಕಲ್ಪನೆಗಳನ್ನು ಉಪನಿಷತ್ತುಗಳು ವಿಸ್ತರಿಸುತ್ತವೆ. ಹೀಗೆ ಮಾಡುವಾಗ ಅವುಗಳನ್ನು ಸುಸಂಸ್ಕೃತಗೊಳಿಸಿ ಉನ್ನತ ಮಟ್ಟಕ್ಕೆ ಏರಿಸುತ್ತವೆ. ಅಪೂರ್ಣನಾದ ಮಾನವನು ಜಗತ್ತಿನ ವಸ್ತುಗಳ ಬಗೆಗೆ ಸರಳ ಸಾಮಾನ್ಯ ಭಾವನೆಗಳನ್ನು ಇಟ್ಟುಕೊಂಡಿರುತ್ತಾನೆ. ಈ ಹಂತದಿಂದ ಅವನನ್ನು ಅಂತಿಮ ಸತ್ಯದ ಸಾಕ್ಷಾತ್ಕಾರದೆಡೆಗೆ ಮೆಟ್ಟಲುಮೆಟ್ಟಲಾಗಿ ಕೊಂಡೊಯ್ಯುವುದೇ ಉಪನಿಷತ್ತುಗಳ ಉಪದೇಶದ ವಿಧಾನ. ಇಲ್ಲಿ ಎಲ್ಲವೂ ಸಕಾರಾತ್ಮಕವಾಗಿದೆ. ಯಾವುದೇ ನಿಷೇಧಾತ್ಮಕ ಭಾವನೆ ಇಲ್ಲಿ ಕಂಡುಬರುವುದಿಲ್ಲ. ಯಾವುದನ್ನು ತಿಳಿದುಕೊಂಡರೆ ಎಲ್ಲವನ್ನೂ ತಿಳಿದುಕೊಂಡಂತೆ ಆಗುವುದೋ ಅದನ್ನೇ **ಪರಮಾತ್ಮ** ಎಂದು ಕರೆಯುವರು. ಅದರ ಸಾಕ್ಷಾತ್ಕಾರವೇ ಉಪನಿಷತ್ತುಗಳ ಧ್ಯೇಯ. ಉಪನಿಷತ್ತುಗಳು ಆ ನಿತ್ಯಸತ್ಯವನ್ನು ಅರಸುವಂತೆ ನಮಗೆ ಕರೆ ನೀಡುತ್ತವೆ.

**(ಮುಂದಿನ ತಿಂಗಳು: ಜೈನ-ಬೌದ್ಧ ದರ್ಶನಗಳು)**

## ಸ್ವಾಮಿ ವಿವೇಕಾನಂದರ ಪ್ರಕಾರ ಶಿಕ್ಷಣದಿಂದ ಕಲಿಯಬೇಕಾದ ಗುಣಗಳು

### ದೇಹಶಕ್ತಿ

ಸೀತಾಮಾತೆಯನ್ನು ಹುಡುಕಿಕೊಂಡು ವಾನರರು ದಕ್ಷಿಣದಿಕ್ಕಿನ ತುದಿಯನ್ನು ತಲುಪಿದರು. ಅಲ್ಲಿ ನೋಡಿದರೆ, ದೊಡ್ಡದೊಂದು ಸಮುದ್ರ. ಅಲ್ಲೊಂದು ಗಿಡುಗ ಇತ್ತು. ಅದರ ಹೆಸರು, ಸಂಪಾತಿ ಎಂದು. ಅದು ಜಟಾಯುವಿನ ಅಣ್ಣ. "ರಾವಣನೇ ಸೀತೆಯನ್ನು ಕದ್ದುಕೊಂಡು ಹೋಗಿದ್ದಾನೆ. ಅವನ ಪಟ್ಟಣವಾದ ಲಂಕೆ ಸಮುದ್ರದ ಮಧ್ಯೆ ನೂರು ಯೋಜನ ದೂರದಲ್ಲಿ ಇದೆ" ಎಂದು ಅದು ವಾನರರಿಗೆ ಹೇಳಿತು.

ಒಂದು ಪುಟ್ಟ ಕೋತಿ ಜಿಗಿದು ಹೇಳಿತು: "ನಾನು ಒಂದು ಯೋಜನ ದೂರ ಹಾರುತ್ತೇನೆ." ಇನ್ನು ಸ್ವಲ್ಪ ದೊಡ್ಡ ಕೋತಿ ಹೇಳಿತು: "ನಾನು ಎರಡು ಯೋಜನ ಹಾರಬಲ್ಲೆ." ವಾಲಿಯ ಮಗ ಯುವರಾಜ ಅಂಗದ ಹೇಳಿದ: "ನಾನು ನೂರು ಯೋಜನ ಹಾರಬಲ್ಲೆ. ಆದರೆ ತಿರುಗಿ ಬರಲಾರೆ." ಆ ಕೋತಿಗಳ ಮಧ್ಯೆ ಒಂದು ಮುದಿ ಕರಡಿ ಇತ್ತು. ಅದರ ಹೆಸರು ಜಾಂಬವಂತ. ಅದು "ಈಗ ನನಗೆ ತುಂಬ ವಯಸ್ಸಾಗಿ ಬಿಟ್ಟಿದೆ. ಹಾರಲಾರೆ" ಎಂದು ಗೊಣಗಿತು.

ಈ ಸಂದರ್ಭದಲ್ಲಿ ಹನುಮಂತ ಚಿಂತೆಯಿಂದ ಕೈಹೊತ್ತು ಕುಳಿತಿದ್ದ. ಜಾಂಬವಂತ ಅವನ ಹತ್ತಿರ ಹೋದ. "ನಿನಗೆ ಮಾತ್ರ ಸಮುದ್ರ ಹಾರಬಲ್ಲ ಶಕ್ತಿ ಇದೆ. ಆದರೆ ನೀನು ಬಾಲ್ಯದಲ್ಲಿ ಪಡೆದ ಋಷಿಶಾಪದಿಂದ ಆ ಶಕ್ತಿಯನ್ನು ಮರೆತು ಬಿಟ್ಟಿದ್ದೀಯೆ. ಎದ್ದೇಳು! ನಿನಗೆ ಅಪಾರ ದೇಹಶಕ್ತಿ ಇದೆ. ಸಮುದ್ರವನ್ನು ಹಾರಿ ಸೀತೆಯನ್ನು ಹುಡುಕಿಕೊಂಡು ಬಾ" ಎಂದು ಹೇಳಿದ. ಆಗ ಹನುಮಂತನಿಗೆ ತನ್ನ ದೇಹಶಕ್ತಿಯ ಅರಿವಾಯಿತು. ಅವನು ತನ್ನ ದೇಹವನ್ನು ದೊಡ್ಡದಾಗಿ ಬೆಳೆಸಿ, ಸಮುದ್ರ ಹಾರಿ ಲಂಕೆಗೆ ಹೋಗಿ, ಸೀತಾಮಾತೆಯನ್ನು ಕಂಡು ಬಂದನು. ಹೀಗೆ ಪ್ರಭು ರಾಮನ ಕಾರ್ಯವನ್ನು ನೆರವೇರಿಸಿದನು.

ಸ್ವಾಮಿ ವಿವೇಕಾನಂದರು ಹೇಳುತ್ತಾರೆ: "ನಿಮ್ಮ ನರಗಳನ್ನು ದೃಢಪಡಿಸಿ. ನಮಗೆ ಇಂದು ಬೇಕಾಗಿರುವುದು ಕಬ್ಬಿಣದಂತಹ ಮಾಂಸಖಂಡಗಳು, ಉಕ್ಕಿನಂತಹ ನರಗಳು. ನನ್ನ ತರುಣ ಸ್ನೇಹಿತರೆ, ಮೊದಲು ಬಲಿಷ್ಠರಾಗಿ. ಇದು ನನ್ನ ಬುದ್ಧಿವಾದ. ಗೀತಾಧ್ಯಯನಕ್ಕಿಂತ ಫುಟ್‌ಬಾಲ್ ಆಟದಿಂದ ಮುಕ್ತಿಗೆ ಹತ್ತಿರ ಹೋಗುವಿರಿ. ಇವು ಕೆಚ್ಚಿನ ಮಾತುಗಳು. ಆದರೂ ನಾನು ಇದನ್ನು ನಿಮಗೆ ಹೇಳಬೇಕಾಗಿದೆ. ಏಕೆಂದರೆ, ನಾನು ನಿಮ್ಮನ್ನು ಪ್ರೀತಿಸುತ್ತೇನೆ." (ಮುಂದಿನ ತಿಂಗಳು: ಏಕಾಗ್ರತಾಶಕ್ತಿ)



### ಒಳ್ಳೆಯ ಗುಣಗಳು

#### ಅಹಿಂಸೆ

ಮಕ್ಕಳೇ, ನಮ್ಮ ಒಳ್ಳೆಯ ಗುಣಗಳಿಂದ ನಾವು ಒಳ್ಳೆಯವರುಎನ್ನಿಸಿಕೊಳ್ಳುತ್ತೇವೆ. ಅದರಲ್ಲಿ ಮೊದಲನೆಯದು **ಅಹಿಂಸೆ**. ಯಾರಿಗೂ ಹಿಂಸೆ ಮಾಡದಿರುವುದೇ ಅಹಿಂಸೆ. ನಾವು ಯಾರಿಗೂ ಕೈಯಲ್ಲಿ ಹಿಂಸೆ ಮಾಡಬಾರದು; ಮಾತಿನಿಂದ ಬೈಯಬಾರದು; ಮನಸ್ಸಿನಲ್ಲಿಯೂ ಇತರರ ಬಗ್ಗೆ ಕೆಟ್ಟ ಯೋಚನೆ ಮಾಡಬಾರದು. ಹೀಗೆ ಶರೀರ, ಮಾತು, ಮನಸ್ಸುಗಳಿಂದ ಯಾರಿಗೂ ತೊಂದರೆ ಕೊಡದಿರುವುದನ್ನೇ ಅಹಿಂಸೆ ಎನ್ನುತ್ತಾರೆ. ಇದೊಂದು ದೊಡ್ಡ ವ್ರತ. ಇದನ್ನು ಎಲ್ಲಾ ಕಾಲ ದಲ್ಲಿಯೂ ಪಾಲಿಸಬೇಕು. ಎಲ್ಲಾ ಕಡೆಯೂ ಪಾಲಿಸಬೇಕು. ಎಂತಹ ಕಷ್ಟವಾದರೂ ಎಲ್ಲಾ ಪರಿಸ್ಥಿತಿಯಲ್ಲಿಯೂ ಪಾಲಿಸಬೇಕು. **ಅಹಿಂಸಾ ಪರಮೋ ಧರ್ಮಃ** – ಅಹಿಂಸೆಯೇ ಪರಮ ಧರ್ಮ ಎಂದು ಋಷಿಗಳು ಹೇಳುತ್ತಾರೆ. "ದಯವೇ ಧರ್ಮದ ಮೂಲವಯ್ಯ" ಎಂದು ಬಸವಣ್ಣನವರು ಹೇಳಿದ್ದಾರೆ. ಅಹಿಂಸೆಯನ್ನು ಪಾಲನೆ ಮಾಡಿದ ಋಷಿಗಳ ಆಶ್ರಮದಲ್ಲಿ ಜಿಂಕೆ–ಸಿಂಹಗಳೂ ತಮ್ಮ ವೈರ ಬಿಟ್ಟು ಅನ್ಯೋನ್ಯವಾಗಿರುತ್ತಿದ್ದವು ಎಂದು ಕಥೆ ಕೇಳುತ್ತೇವೆ. ಆಧುನಿಕ ಕಾಲದಲ್ಲಿ ಗಾಂಧೀಜಿ ಅಹಿಂಸೆಗೆ ಒತ್ತುಕೊಟ್ಟರು. ಅಹಿಂಸೆಯಿಂದ ಎಲ್ಲರೊಡನೆ ಸ್ನೇಹ ಬೆಳೆಯುತ್ತದೆ. ಬಾಳು ಸಂತೋಷಮಯವಾಗುತ್ತದೆ. (ಮುಂದಿನ ತಿಂಗಳು: **ಸತ್ಯ**)

### ಕಷ್ಟ ಬಂದಾಗ ಏನುಮಾಡಬೇಕು?

ನಿನಗೆ ಬೆಳಕು ಬೇಕಾದಾಗ, ನಿನಗೆ ಯಾವುದಾದರೂ ಸಂದೇಹ ಅಥವಾ ಕಷ್ಟಗಳು ಬಂದಾಗ ಕಣ್ಣೀರು ಸುರಿಸಿ ಭಗವಂತನನ್ನು ಪ್ರಾರ್ಥಿಸು. ಅವನು ನಿನ್ನ ಮನಸ್ಸಿನ ಕೊಳೆಯನ್ನು ತೊಳೆದು ಮನೋವೇದನೆಯನ್ನು ಹೋಗಲಾಡಿಸುತ್ತಾನೆ. ಯಾವಾಗಲೂ ಪ್ರಾರ್ಥನೆ ಮಾಡುವ ಅಭ್ಯಾಸವುಳ್ಳವನು ಎಲ್ಲ ಕಷ್ಟಗಳನ್ನೂ ಸುಲಭವಾಗಿ ದಾಟುತ್ತಾನೆ; ಎಲ್ಲ ಸಂಕಟಗಳ ಮಧ್ಯದಲ್ಲೂ ವಿಚಲಿತನಾಗದೆ ಶಾಂತಿಯಿಂದಿರುತ್ತಾನೆ.

–ಶ್ರೀಮಾತೆ ಶಾರದಾದೇವಿ